ಕವಿತೆ




ಬಸವರಾಜ್ ಹೃತ್ಸಾಕ್ಷಿ

ಕಲೆ: ರಾಮಕೃಷ್ಣ ಸಿದ್ರಪಾಲ


# ನಾನು ದೇವರ ದ್ವೇಷಿಯಲ್ಲ

1

ನಡೆದಾಡುವ ದೇವರು
ಕಾಲು
ನುಡಿದಾಡುವ ದೇವರು
ನಾಲಗೆ
ಮಿಡುಕಾಡುವ ದೇವರು
ಹೃದಯ
ಹುಡುಕಾಡುವ ದೇವರು
ಕಣ್ಣು
ಉಸಿರಾಡುವ ದೇವರು
ಮೂಗು
ಮನೆ ಮಾಡುವ ದೇವರು
ಕೈ
ಹುಟ್ಟಿ ಬಾಡುವ ದೇವರು
ಹೂವು
ತಟ್ಟಿ ಮುಟ್ಟುವ ದೇವರು
ನೋವು
ಉರಿಸಿ ಹರಸುವ ದೇವರು
ಬಿಸಿಲು
ಹಸಿದು ಹಿಸಿದು ಕೊಲುವ ದೇವರು
ಅನ್ನ
ಎಲ್ಲ ಮನೆಗೂ ಸೂರು ದೇವರು
ಮುಗಿಲು
ಕಟ್ಟಿ ಕಾಡುವ ದೇವರು
ನೀನು
ನಾನು ದೇವರ ದ್ವೇಷಿಸುವುದಿಲ್ಲ
ನಾನೂ ದೇವರು

